

# ಎಲ್ಲೆಲ್ಲೂ ಲಿಯೊ ಹವಾ

ವಿಜಯ್, ಲೋಕೇಶ್ ಕನಗರಾಜ್

ಅಕ್ಟೋಬರ್ 19ರಂದು ತೆರೆಕಾಣಲಿರುವ 'ಲಿಯೊ' ತಮಿಳು ಸಿನಿಮಾ ಅದಾಗಲೇ 380 ಕೋಟಿ ರೂಪಾಯಿಗೂ ಹೆಚ್ಚು ಆದಾಯವನ್ನು ತಂದಿತ್ತಿರುವ ಸುದ್ದಿ ಹರಿದಾಡುತ್ತಿದೆ.

ಲೋಕೇಶ್ ಕನಗರಾಜ್ ನಿರ್ದೇಶನದ 'ಲಿಯೊ'ದ ನಾಯಕ ತಲಪತಿ ವಿಜಯ್. 'ಮಾಸ್ಟರ್' ಸಿನಿಮಾದ ಯಶಸ್ಸಿನ ಮೇಲೆ ಈ ಚಿತ್ರದ ವಹಿವಾಟು ಇಷ್ಟರಮಟ್ಟಿಗೆ ನಡೆದಿರುವುದು ಗುಟ್ಟೇನಲ್ಲ. ಫಾರ್ಸ್ ಫಿಲ್ಮ್ ಎಂಬ ಸಂಸ್ಥೆಯು ವಿದೇಶಿ ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವ ಹಕ್ಕಿಗಾಗಿ ₹ 60 ಕೋಟಿ ನೀಡಿದೆ. ಕರ್ನಾಟಕದಲ್ಲಿ ತೆರೆಕಾಣಿಸಲು ಹಕ್ಕು ಪಡೆಯಲೆಂದೇ ಇಬ್ಬರು ನೀಡಿರುವ ಕೊಟೇಷನ್ ಏನಿಲ್ಲವೆಂದರೂ ₹ 15 ಕೋಟಿ ದಾಟುತ್ತಿದೆ. ಗೋಲ್ಡ್‌ಮೈನ್ಸ್ ಟೆಲಿಫಿಲ್ಮ್ ಸಂಸ್ಥೆಯು ಹಿಂದಿಗೆ ಡಬ್ ಮಾಡಿದ ಆವೃತ್ತಿ ಬಿಡುಗಡೆ ಮಾಡಲೆಂದೇ ₹28 ಕೋಟಿ ನೀಡಿ ಹಕ್ಕು ಖರೀದಿಸಿದೆ. ಆಂಧ್ರಪ್ರದೇಶದಲ್ಲಿ ತೆರೆಕಾಣಿಸಲು ಅಂದಾಜು ₹ 21 ಕೋಟಿ ಹೂಡಿಕೆ ಮಾಡಲಾಗಿದೆ. ನಟ ವಿಜಯ್ ಕೇರಳದಲ್ಲೂ ಮನೆಮಾತು ಎನ್ನುವುದಕ್ಕೆ ಅಲ್ಲಿಯೂ ₹16 ಕೋಟಿಗೆ ಹಕ್ಕು ಮಾರಾಟವಾಗಿರುವುದೇ ಸಾಕ್ಷಿ. ಆಡಿಯೊ ಹಕ್ಕುಗಳನ್ನು ಸೋನಿ ಕಂಪನಿಯು ₹16 ಕೋಟಿಗೆ ಖರೀದಿಸಿರುವುದೂ ದೊಡ್ಡ ಸುದ್ದಿ. ಡಿಜಿಟಲ್ ಹಕ್ಕಿಗೆ ನೆಟ್‌ಫ್ಲಿಕ್ಸ್ ₹ 140 ಕೋಟಿ ನೀಡಿದ್ದು, ಸನ್ ಟಿವಿ ಸ್ಯಾಟಲೈಟ್ ಹಕ್ಕಿಗೆಂದೇ ₹ 90 ಕೋಟಿ ಎತ್ತಿಟ್ಟಿದೆ.

ಈ ಅಂಕಿಅಂಶವೆಲ್ಲ ತಮಿಳುನಾಡಿನ ಹೊರಗಡೆ ನಡೆದಿರುವ ವಹಿವಾಟಿನ ಮಾಹಿತಿಯಷ್ಟೆ. ತಮಿಳುನಾಡಿನಾದ್ಯಂತ ಎಲ್ಲೆಲ್ಲಿ ಚಿತ್ರಮಂದಿರಗಳಲ್ಲಿ ಯಾರು ಯಾರು ಬಿಡುಗಡೆ ಮಾಡುತ್ತಾರೆ ಎನ್ನುವ ವ್ಯವಹಾರ ಇನ್ನೂ ಮುಗಿದಿಲ್ಲ. ಒಂದು ಅಂದಾಜಿನ ಪ್ರಕಾರ ತೆರೆಕಾಣುವ ಮೊದಲೇ 'ಲಿಯೊ' ₹ 500 ಕೋಟಿಗೂ ಹೆಚ್ಚು ವಹಿವಾಟು ನಡೆಸುವ ಎಲ್ಲಾ ಲಕ್ಷಣಗಳಿವೆ. ನಿರ್ಮಾಪಕರಾದ ಎಸ್.ಎಸ್. ಲಲಿತ್‌ಕುಮಾರ್ ಹಾಗೂ ಜಗದೀಶ್ ಪಳನಿಸಾಮಿ ಅವರಿಗೆ ಇದಕ್ಕಿಂತ ಒಳ್ಳೆಯ ಸುದ್ದಿ ಇನ್ಯಾವುದು ಇರಲಿಕ್ಕೆ ಸಾಧ್ಯ?

ವರ್ಷದ ಮೊದಲರ್ಧ ಮುದುರಿದಂತೆ ಇದ್ದ ಚಿತ್ರರಂಗಕ್ಕೆ ಇದು ಚೇತರಿಕೆಯ ಪರ್ವ. ರಜನಿಕಾಂತ್ ಅಭಿನಯದ 'ಜೈಲರ್' ದೊಡ್ಡ ಯಶಸ್ಸನ್ನು ದಕ್ಕಿಸಿಕೊಂಡ ಮೇಲೆ ಈಗ 'ಲಿಯೊ' ಪರಿಣಾಮ ನೋಡಲು ದಿನಗಣನೆ ಶುರುವಾಗಿದೆ.

₹ 135 ಕೋಟಿ ಬಜೆಟ್‌ನ 'ಮಾಸ್ಟರ್' ಮೂರು ಪಟ್ಟು ಹಣ ಬಾಚಿಹಾಕಿತ್ತು. 'ಲಿಯೊ' ಚಿತ್ರದ ಬಜೆಟ್ ₹ 200 ಕೋಟಿ ದಾಟಿದೆ ಎಂಬ ಸುದ್ದಿ ಇದೆ. ತ್ರಿಶಾ, ಸಂಜಯ್ ದತ್, ಮಿಸ್ಕಿನ್, ಅರ್ಜುನ್ ಸರ್ಜಾ, ಗೌತಮ್ ವಾಸುದೇವ್ ಮೆನನ್ ಮೊದಲಾದ ಘಟಾನುಘಟಿಗಳು ಈ ಸಿನಿಮಾದ ತಾರಾಬಳಗದಲ್ಲಿದ್ದಾರೆ. ಅನಿರುದ್ಧ್ ರವಿಚಂದರ್ ಸ್ವರ ಸಂಯೋಜನೆಯ ಹಾಡುಗಳಿವೆ. ■



## ಸಿನಿಮಾಗಳಿಗೆ ಶುಕ್ರದೆಸೆ ಹೇಮಾ

"ಒಟಿಟಿ ಏನೇ ಆದರೂ ಕಿರುತೆರೆ. ದೊಡ್ಡ ತೆರೆ ಮೇಲೆ ಸಿನಿಮಾ ನೋಡುವ ಬಯಕೆ ಈಗಲೂ ಜನರಲ್ಲಿ ಇದೆ. 'ಗದರ್2' ತರಹದ ಸಾಹಸಪ್ರಧಾನ ಸಿನಿಮಾ ಗೆದ್ದಿರುವುದು, 'ಜವಾನ್' ಹಿಂದಿ ಚಲನಚಿತ್ರಕ್ಕೆ ಒಳ್ಳೆಯ ಬ್ಯುಸಿನೆಸ್ ಆಗುತ್ತಿರುವುದು ನನ್ನ ಈ ಅಭಿಪ್ರಾಯಕ್ಕೆ ಪುಷ್ಟಿ ಕೊಡುತ್ತದೆ" ಎಂದು ನಟಿ ಹೇಮಾಮಾಲಿನಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಕೋವಿಡ್ ಕಾಲದಲ್ಲಿ ಜನರಿಗೆ ಒಟಿಟಿ ವೇದಿಕೆ ಕಾಲಹರಣ ಮಾಡುವ ದಾರಿಯಾಗಿತ್ತು. ವರ್ಷಗಟ್ಟಲೆ ಅದನ್ನೇ ನೋಡುತ್ತಾ ಕೂರಲು ಸಾಧ್ಯವಿಲ್ಲ. ಅದರಿಂದಾಗಿಯೇ ಜನ ಕ್ರಮೇಣ ಚಿತ್ರಮಂದಿರಗಳಿಗೆ ಮರಳಿ ಬರುತ್ತಿದ್ದಾರೆ. ದೊಡ್ಡ ಪರದೆಯ ಮೇಲೆ ಸಿನಿಮಾದ ದೃಶ್ಯಗಳನ್ನು ನೋಡುವ ಅನುಭವವೇ ಬೇರೆ. ಅದಕ್ಕಾಗಿ ಜನರು ಕುತೂಹಲಿಗಳಾಗಿರುವುದು ಸ್ಪಷ್ಟ. ಅದರ ಫಲಿತಾಂಶ ಬಾಕ್ಸ್‌ಆಫೀಸ್ ಗಳಿಕೆಯಲ್ಲಿ ಎದ್ದುಕಾಣುತ್ತಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಹೇಮಾಮಾಲಿನಿ ಸಿನಿಮಾಗಳಲ್ಲಿ ಈಗ ಅಭಿನಯಿಸುತ್ತಿಲ್ಲ. ಹಾಗೆಂದು ನಿವೃತ್ತಿಯನ್ನೇನೂ ಘೋಷಿಸಿಲ್ಲ. ಈಗಲೂ ಒಳ್ಳೆಯ ಪಾತ್ರಗಳು ಸಿಕ್ಕರೆ ಅಭಿನಯಿಸಲು ಅವರು ಸಿದ್ಧರಿದ್ದಾರೆ. ಅವರ ಪತಿ ಧರ್ಮೇಂದ್ರ ಈಗಲೂ ಒಂದಾದ ಮೇಲೆ ಒಂದರಂತೆ ಸಿನಿಮಾಗಳಿಗೆ ಸಹಿ ಹಾಕುತ್ತಿದ್ದಾರೆ. ■